ಮಾಡುವ ಅಂಗನವಾಡಿ, ಪ್ರಾಥಮಿಕ, ಪ್ರೌಢ ಶಾಲೆಯ ಹಾಗೂ ಕಾಲೇಜು ಅಧ್ಯಾಪಕ ಬಂಧುಗಳು ತಮ್ಮ ವಿದ್ಯಾರ್ಥಿಗಳಿಗಾಗಿ ಹೊಸ ಕಾಲದ ಮಕ್ಕಳ ಸಾಹಿತ್ಯ ಕೃತಿಗಳನ್ನು ಪರಿಚಯಿಸುವ ಕೆಲಸವನ್ನು ಮಾಡಿದಾಗ ಮಕ್ಕಳಲ್ಲಿ ಸಹಜವಾಗಿ ಸಾಹಿತ್ಯ ಆಸಕ್ತಿ ಮೂಡೀತೆಂದು ಹೇಳಬಹುದು. ಸನ್ನಿವೇಶ ಹೇಗೆ ಇದ್ದರೂ ಬದುಕು ಮೂಡಿಸುವ ರೋಚಕತೆ, ಹುಟ್ಟಿಸುವ ಬೆರಗು, ಸಂತೋಷ, ಕಳವಳಗಳನ್ನು ಹಂಚಿಕೊಳ್ಳದೆ ಸುಮ್ಮನಿರಲು ಸಾಧ್ಯವಿಲ್ಲ. ತೋಡಿಕೊಳ್ಳುವ ಖುಷಿ, ಕೇಳುವವರು ಇದ್ದೇ ಇದ್ದಾರೆ ಎಂಬ ನಂಬಿಕೆಯೇ ಬರೆಯುವ ಉತ್ಸಾಹವನ್ನು ಉಳಿಸುವುದು. ಮೇಲಾಗಿ, ಪರಿಣಾಮ, ಪ್ರತಿಫಲಗಳನ್ನು ಲೆಕ್ಕಿಸದೆ ನಮ್ಮ ನಮ್ಮ ಕರ್ತವ್ಯವನ್ನು ಮಾಡುತ್ತ ಇರುವುದೇ ಆರೋಗ್ಯಕರ ನಿಲುವಲ್ಲವೇ? ಹಾಗೆ ನೋಡಿದರೆ, ಪತ್ರಿಕೆಗಳೂ ಮಕ್ಕಳ ಪುಟಕ್ಕೆ ಮೀಸಲಿಡುವ ಜಾಗ ಕಿರಿದಾಗುತ್ತಿದೆ. 'ಪ್ರಜಾವಾಣಿ ದೀಪಾವಳಿ ವಿಶೇಷಾಂಕ' ಕೂಡ ಶಿಶು ಕಾವ್ಯ ಸ್ಪರ್ಧೆ ಕೈ ಬಿಟ್ಟಿದೆ. ಏನೇ ಆದರೂ ಹಿರಿಯ ಕವಿ ಎಚ್.ಎಸ್.ವಿ. ಅವರು 'ಗಂಧವ್ರತ' ಕವಿತೆಯಲ್ಲಿ ಹೇಳುವಂತೆ, 'ಮೂಗುಳ್ಳವರು ಎಲ್ಲೋ ದೂರದಲ್ಲಿದ್ದೂ ನಿನ್ನ ಗಂಧವ್ರತವ ಮೆಚ್ಚಿ ತಲೆದೂಗುವರು' ಎಂಬ ನಂಬಿಕೆಯೇ ಈ ಕಾಲದಲ್ಲಿ ಎಲ್ಲರನ್ನೂ ಕಾಯುವ ಶಕ್ತಿ.

## 4

ಮಕ್ಕಳಿಗಾಗಿ ಬರೆಯುವವರು, ಏನನ್ನು ಕೊಟ್ಟರೂ ಮಕ್ಕಳು ತೆಗೆದುಕೊಳ್ಳುತ್ತಾರೆ ಎಂಬ ಭಾವದಿಂದ ಹೊರಬರಬೇಕು. ಏನಾದರೂ ವಿಶಿಷ್ಟವಾದುದು, ಹೇಳಲೇಬೇಕು ಎನಿಸಿದುದು ಇದ್ದಾಗ ಮಾತ್ರ ಬರೆಯಬೇಕು. ಪ್ರಮಾಣಕ್ಕಿಂತ ಗುಣಮಟ್ಟದ ಕಡೆಗೆ ಗಮನ ಹರಿಸಬೇಕು. ಹಾಗೆಯೇ ಮಕ್ಕಳ ಸಾಮರ್ಥ್ಯವನ್ನು ಕೀಳಂದಾಜು ಮಾಡಬಾರದು. ಅವರಿಗೆ ಅರ್ಥವಾಗದು, ಅದು ಅವರಿಗೆ ಬೇಡ – ಈ ರೀತಿಯ ಧೋರಣೆ ಉಚಿತವಲ್ಲ.

ಮಗುವಿಗೆ ಒಂದು ಕೃತಿಯನ್ನು ಓದಿದ ನಂತರ ಏನೋ ಹೊಸತು ಸಿಕ್ಕಿದಂತೆ ಭಾಸವಾಗಬೇಕು. ಆ ನಿಟ್ಟಿನಲ್ಲಿ ಅವರನ್ನು ಚಿಂತನೆಗೆ ಹಚ್ಚುವ ರೀತಿಯಲ್ಲಿ ಇರಬೇಕು. ಅವರ ಕಲ್ಪನಾಶಕ್ತಿ, ಅರಿವು, ಆನಂದಾನುಭವ ಸಾಮರ್ಥ್ಯ ವೃದ್ಧಿಗೆ ಕಾರಣವಾಗಬೇಕು. ಆಗ, ಆ ಬರಹ ಮೌಲಿಕ.

## 5

ಮೂಲಭೂತವಾಗಿ ಮಕ್ಕಳಿಗೆ ಬೇಕಾದುದು ಆನಂದ. ಓದಿದಾಗ ಭಾಷೆಯ ಮಜಾ, ಭಾವದ ಮಜಾ, ಕಲ್ಪನೆಯ ಮಜಾ, ಹೊಸ ಸತ್ಯಗಳನ್ನು ಅರಿಯುವ ಮಜಾ ಸಿಗಬೇಕು. ಆಗ, ಆ ಓದು ಸಾರ್ಥಕವಾಗುತ್ತದೆ. ಮಕ್ಕಳ ಜೊತೆ ಒಡನಾಡುತ್ತಾ ಅವರ ಭಾವ ಸಾಹಚರ್ಯದಿಂದ ಮಗುವಿನ ಮನವನ್ನು ಅರಿಯಬಹುದು.

ನಮ್ಮನ್ನು ನಾವು ಅರಿಯುವುದೇ ಮಕ್ಕಳನ್ನು ಅರಿಯಲು ಇರುವ ಸುಲಭದ ದಾರಿ. ನಾವೂ ಒಂದೊಮ್ಮೆ ಮಗುವೇ ಆಗಿದ್ದೆವು ಎಂಬುದನ್ನು ನೆನಪಿಗೆ ತಂದುಕೊಂಡರೆ ಕೆಲಸ ಸುಲಭವಾಗುತ್ತದೆ.

## 6

ಇಲ್ಲ. ಈಗ ಪದವಿಪೂರ್ವ ಕಾಲೇಜಿನಲ್ಲಿ ಪಾಠ ಮಾಡುತ್ತಿರುವುದರಿಂದಾಗಿ ಅವರಿಗಾಗಿಯೂ ಬರೆಯಬೇಕು ಎನಿಸುತ್ತಿದೆ.

## 7

'ನಿಮ್ಮ ಕ್ರಿಯೇಟಿವಿಟಿ ಮಕ್ಕಳ ಕ್ರಿಯೇಟಿವಿಟಿ ಹಾಗೆಯೇ ಉಂಟು' ಎಂಬ ಪಾರ್ಥ ಎಂಬ ಬಾಲಕನ ಮಾತು, 'ನಿಮ್ಮ ಕವಿತೆಗಳು ಇತರರ ಕವಿತೆಗಳಂತಿರದೆ, ವಿಚಿತ್ರವಾಗಿ ಇರುತ್ತವೆ, ಆ ವಿಚಿತ್ರವೇ ನಿಮ್ಮ ಕವಿತೆಗಳನ್ನು ಓದಲು ಪ್ರೇರಿಸುತ್ತವೆ' ಎಂಬ ಕೌಶಿಕಾ ಎಂಬ ಬಾಲಕಿಯ ಮಾತು ಹಾಗೂ ಮಕ್ಕಳ 'ಕಾವ್ಯ ಕ್ಷೇತ್ರದಲ್ಲಿ ಅಭಿಮಾನಪಡಬಹುದಾದ ಯಾವ ಹೊಸ ಪ್ರತಿಭೆಗಳೂ ಕಾಣದೆ ಮನಸು ತಪ್ತವಾಗಿದ್ದಾಗ ತೋಳ್ಪಾಡಿ ಕವಿತೆಗಳು ತೆಂಕಣ ದಿಕ್ಕಿನಿಂದ ತೇಲಿ ಬಂದಿವೆ' ಎಂಬ ಎಚ್.ಎಸ್.ವಿ. ಅವರ ಮಾತುಗಳು ಮನವನ್ನು ಮುಟ್ಟಿರುವ ಮಾತುಗಳಾಗಿವೆ.

●